ಲಿಂಗಸೂಗೂರು ತಾಲ್ಲೂಕಿನ ಲಿಂಗಸೂಗೂರು ಪಟ್ಟಣಕ್ಕೆ ಡಿಪ್ಲೋಮ ಕಾಲೇಜು ಪ್ರಾರಂಭಿಸುವುದು.

413 (570) ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸಗೂರು): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನಲ್ಲಿ ಲಿಂಗಸೂಗೂರು ಪಟ್ಟಣಕ್ಕೆ ಸರ್ಕಾರಿ ಡಿಪ್ಲೋಮಾ ಕಾಲೇಜನ್ನು ಮಂಜೂರು ಮಾಡುವ ಬಗ್ಗೆ ಪ್ರಸ್ತಾವನೆಯು ಸರ್ಕಾರದ ಗಮನದಲ್ಲಿಯೇ;

2. ಹಾಗಿದಲ್ಲಿ ಈ ವರ್ಷದ ಶೈಕ್ಷಣಿಕ ಸಾಲಿನಲ್ಲಿ ಎಷ್ಟು ಡಿಪ್ಲೋಮಾ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ;

3. ಕಾಲೇಜನ್ನು ಪ್ರಾರಂಭಿಸಲು ಬೇಕಾದ ಮೂಲಭೂತ ಸೌಕರ್ಯಗಳೇನು; ಕಾಲೇಜನ್ನು ಪ್ರಾರಂಭಿಸಲು ಬೇಕಾಗಬಹುದಾದ ಒಟ್ಟು ಅಂದಾಜು ಹಣವೆಷ್ಟು?

ಡಾ.ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು):

1. ಇಲ್ಲ

2. 2002-03ನೇ ಸಾಲಿಗೆ ರಾಜ್ಯದಲ್ಲಿ 05 ಸರ್ಕಾರಿ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸಲು ಎಐಸಿಟಿಇ ನವದೆಹಲಿ ಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

3. ಪಾಲಿಟೆಕ್ನಿಕ್ ಸಂಸ್ಥೆಯನ್ನು ಪ್ರಾರಂಭಿಸಲು ನಿಯಮ 10 (ಕೆ) ಯನುಸಾರ ಎಐಸಿಟಿಇ ನವದೆಹಲಿಯ ಅನುಮೋದನೆ ಪಡೆಯಬೇಕಾಗುತ್ತದೆ. ಪಾಲಿಟೆಕ್ನಿಕ್ ಸಂಸ್ಥೆ ಪ್ರಾರಂಭಿಸುವ ಸಂಬಂಧದಲ್ಲಿ ನಿಯಮಾವಳಿ ರೀತ್ಯ ಗ್ರಾಮೀಣ ಪ್ರದೇಶದಲ್ಲಿ 20-00 ಎಕರೆ ಜಮೀನು ಇರಬೇಕಾಗುತ್ತದೆ. ಯಾವುದೇ ಒಂದು ಸುಸಜ್ಜಿತ ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭಿಸಬೇಕಾದರೆ ಕಟ್ಟಡ, ಯಂತ್ರೋಪಕರಣ, ಪೀಠೋಪಕರಣ, ಗ್ರಂಥಾಲಯ ಪುಸಕ್ತ ಮುಂತಾದ ಮೂಲಭೂತ ಸೌಲಭ್ಯಗಳನ್ನು ಪೂರೈಸಲು ಸುಮಾರು ರೂ.5.00 ಕೋಟಿಗಳಷ್ಟು ಆಯವ್ಯಯದ ಆಗತ್ಯತೆ ಇರುತ್ತದೆ.

ಲಿಂಗಸಗೂರು ಪಟ್ಟಣದ ಆಸ್ಪತ್ರೆಯ ನಿರ್ಮಾಣ

414 (572) ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸಗೂರು): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಲಿಂಗಸಗೂರು ತಾಲ್ಲೂಕಿನ ಲಿಂಗಸಗೂರು ಪಟ್ಟಣದಲ್ಲಿ 100 ಹಾಸಿಗೆಯ ಆಸ್ಪತ್ರೆಯನ್ನು ಯಾವ ಯೋಜನೆಯಲ್ಲಿ ತೆಗೆದುಕೊಳ್ಳಲಾಗಿದೆ?

2. ಈ ಆಸ್ಪತ್ರೆಯ ಕಾಮಗಾರಿಯು ಕಳಪೆ ಮಟ್ಟದಾಗಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ?